# ‘ಪರಿಸರ ಉಳಿದರೆ ಪರಿವಾರ ಉಳಿವು’

## ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾ.ಬಿ.ಎನ್. ಗಂಗಾಧರ್

ಪ್ರಜಾವಾಣಿ ವಾರ್ತೆ

ಶಿರಸಿ: ಪರಿಸರ ಉಳಿದರೆ ಪರಿವಾರ ಉಳಿಯುತ್ತದೆ ಎಂಬ ನಂಬಿಕೆ ಸಮಾಜದ ಪ್ರತಿಯೊಬ್ಬರಲ್ಲಿ ಹೆಚ್ಚುವ ಅಗತ್ಯ ಇದೆ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾ.ಬಿ.ಎನ್. ಗಂಗಾಧರ್ ಹೇಳಿದರು.

ನಗರದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ವೃಕ್ಷಲಕ್ಷ ಆಂದೋಲನ ಭಾನುವಾರ ಆಯೋಜಿಸಿದ್ದ, ‘ಪರಿಸರ ಸಂರಕ್ಷಣೆ-ಸುಸ್ಥಿರ ಅಭಿವೃದ್ಧಿ ರಾಜ್ಯಮಟ್ಟದ ಸಮ್ಮೇಳನ, ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿದ ಅವರು, ‘ಇಂದು ಪರಿಸರದ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಇಂಥ ಸಂದರ್ಭದಲ್ಲಿ ಪರಿಸರ ಉಳಿದರೆ ನಾವು ಉಳಿಯುತ್ತೇವೆ ಎಂಬ ವಾಸ್ತವ ಅರ್ಥ ಮಾಡಿಸುವ ಅಗತ್ಯವಿದೆ’ ಎಂದರು.

ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥರಾದ ತೇಜಸ್ವಿನಿ ಅನಂತಕುಮಾರ ಮಾತನಾಡಿ, ‘ಅಂತರರಾಷ್ಟ್ರೀಯ ಮಟ್ಟದ ಸಮಸ್ಯೆಗಳಿಗೆ ಸ್ಥಳೀಯ ಮಟ್ಟದಲ್ಲಿ ಪರಿಹಾರ ಹುಡುಕುವ ಪ್ರಯತ್ನ ಹೆಚ್ಚಬೇಕು’ ಎಂದರು.

‘ಪರಿಸರ ರಕ್ಷಣೆಯ ಸವಾಲುಗಳು ಈ ಹಿಂದಿಗಿಂತ ಹೆಚ್ಚಿವೆ. ಮೈಕ್ರೋ ಪ್ಲಾಸ್ಟಿಕ್ ಸಮಸ್ಯೆ ಹೆಚ್ಚುತ್ತಿದೆ. ಇಂಥ ಕಾಲಘಟ್ಟದಲ್ಲಿ ಕಸರಹಿತ ವ್ಯವಸ್ಥೆಗೆ ಪೂರಕವಾಗಿ ಪ್ಲೇಟ್ ಬ್ಯಾಂಕ್ ಅಗತ್ಯ ಹೆಚ್ಚಿದೆ. ಹೀಗಾಗಿ ಶಿರಸಿಯಲ್ಲಿ ಶೀಘ್ರದಲ್ಲೇ ಎರಡು ಪ್ಲೇಟ್ ಬ್ಯಾಂಕ್ ಅನುಷ್ಠಾನ ಮಾಡಲಾಗುವುದು’ ಎಂದರು.



ಶಿರಸಿಯಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರು ವೃಕ್ಷಲಕ್ಷ ಪ್ರಶಸ್ತಿಯನ್ನು ಪ್ರಕಾಶ ಮೇಸ್ತ ಅವರಿಗೆ ಪ್ರದಾನ ಮಾಡಿದರು

ಅನಂತ ಹೆಗಡೆ ಅಶೀಸರ ಅವರ ಅಭಿನಂದನಾ ಗ್ರಂಥ ‘ವೃಕ್ಷಮಿತ್ರ’ ಲೋಕಾರ್ಪಣೆ ಮಾಡಿದ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಆಶೀರ್ವದಿಸಿ, ‘ಪ್ರಾಚೀನ ಭಾರತೀಯರ ದೃಷ್ಟಿಯಲ್ಲಿ ಪರಿಸರ ಸಂರಕ್ಷಣೆ ಎಂದರೆ, ಪರಿಸರದ ಪಂಚ ಮಹಾ ಭೂತಗಳ ರಕ್ಷಣೆಯಾಗಿದೆ. ಅವುಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಅದಕ್ಕಾಗಿ ಪರಿಸರದೊಟ್ಟಿಗೆ ಜನರ ಶ್ರದ್ಧಾ ಭಾವ ಬೆಸೆಯಲಾಗಿದೆ. ಆದರೆ ಇಂದು ಅಭಿವೃದ್ಧಿ ಹೆಸರಲ್ಲಿ ಪರಿಸರ ನಾಶ ಹೆಚ್ಚಿದೆ. ಹೀಗೆ ಹದಗೆಟ್ಟ ಪ್ರಕೃತಿಯ ಆರೋಗ್ಯದ ರಕ್ಷಣೆ ಇಂದಿನ ಅಗತ್ಯ’ ಎಂದರು.

ಜಿಲ್ಲೆಯ ಪರಿಸರ ಹೋರಾಟಗಳಲ್ಲಿ ಅನಂತ ಅಶೀಸರ ಪಾತ್ರ ಮಹತ್ವದ್ದಾಗಿದೆ. ಪರಿಸರ ಆಂದೋಲನಕ್ಕೆ ಉತ್ತೇಜನ ನೀಡಲು ಕಾರ್ಯಕ್ರಮ ಆಯೋಜಿಸಿದ್ದು ಶ್ಲಾಘನೀಯ ಎಂದರು.

ಹಿರಿಯ ಪತ್ರಕರ್ತ ದು.ಗು. ಲಕ್ಷ್ಮಣ ಮಾತನಾಡಿ, ‘ಇಂದು ಹಲವು ಜನರಿಗೆ ಪರಿಸರ ಹೋರಾಟವು ಫ್ಯಾಷನ್ ಆಗಿದೆ. ಆದರೆ ಪರಿಸರವಾದಿ ಅನಂತ ಅಶೀಸರ ಅವರ ಪರಿಸರ ಹೋರಾಟವು ಎಲ್ಲರಿಗೂ ಪ್ರೇರಣಾದಾಯಿ ಆಗಿದೆ’ ಎಂದರು.

ಭಾರತೀಯ ಭಾಷಾ ಸಮಿತಿ ಅಧ್ಯಕ್ಷ ಚ.ಮೂ. ಕೃಷ್ಣ ಶಾಸ್ತ್ರಿ ಮಾತನಾಡಿ, ‘ಪರಿಸರ ಹೋರಾಟ ಕ್ಷೇತ್ರದಲ್ಲಿ ನಿಸ್ಪ್ರಹವಾಗಿ ತೊಡಗಿಕೊಂಡಿರುವ ಅಶೀಸರ ಅವರು ಪರಿಸರ ಸಂರಕ್ಷಣೆಗೆ ವಿಶೇಷ ಕೊಡುಗೆ ನೀಡಿದ್ದಾರೆ’ ಎಂದರು.

ಜೀವ ಪರಿಸರ ವಿಜ್ಞಾನಿ ಪ್ರಕಾಶ ಮೇಸ್ತ ಅವರಿಗೆ ‘ವೃಕ್ಷಲಕ್ಷ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪರಿಸರವಾದಿ ಅನಂತ ಅಶೀಸರ ಹಾಗೂ ಮಮತಾ ಹೆಗಡೆ ದಂಪತಿಯನ್ನು ಅಭಿನಂದಿಸಲಾಯಿತು. ಪರಿಸರ ತಜ್ಞ ಬಿ.ಎಂ.ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ಸ್ವರ್ಣವಲ್ಲೀ ಮಠದ ಅಧ್ಯಕ್ಷ ವಿ.ಎನ್. ಹೆಗಡೆ ಬೊಮ್ನಳ್ಳಿ ಇದ್ದರು. ಕೇಶವ ಕೊರ್ಸೆ ಸ್ವಾಗತಿಸಿದರು. ಶೈಲಜಾ ಗೋರ್ನಮನೆ ಕಾರ್ಯಕ್ರಮ ನಿರೂಪಿಸಿದರು.